ಅವರಿಗೆ ನಾರಾಯಣರಾಯರು ಬಂದು ಹೋದ ವಿಷಯ ತಿಳಿಯಿತು. ಅಂದು ಊಟಕ್ಕೂ ನಿಲ್ಲದೆ ಹೊರಟು ಹೋದದ್ದೇಕೆಂದು ಗೊತ್ತಾಗಲಿಲ್ಲ. ಪಾಪ ನಾರಾಯಣರಾಯರ ಬೀಳುಗಾಲ, ಅದರಲ್ಲೂ ಸಂಕೋಚ ಸ್ವಭಾವ, ತಾವಾದರೂ ಹೋಗಿ ಬರೋಣವೆಂದರೆ ನೂರಾರು ವ್ಯಾಪಾರಗಳಿಂದ ಬಿಡುವು ಸಿಗುವುದಿಲ್ಲ. ತಮ್ಮ ಮನೆಗೆ ಬಂದ ಆಪ್ತರೊಡನೆ ಕೆಲಕ್ಷಣ ಕಳೆಯಲಾಗಲಿಲ್ಲವೆಂದು ಹಳಹಳಿಸಿದರು.

ಪುರುಷೋತ್ತಮ ರಾಯರು ಎರಡನೆಯ ಸೊಸೆಯನ್ನು ತಂದು ಮನೆ ತುಂಬಿಸಿಕೊಳ್ಳುವ ಆತುರದಲ್ಲಿದ್ದರು. ಅನೇಕ ಶ್ರೀಮಂತ ಮನೆತನಗಳಿಂದ ಹುಡುಗಿಯರ ಜಾತಕಗಳೂ ಬಂದಿದ್ದವು. ಅವರು ಶ್ರೀಮಂತಿಕೆಯ ಮಾನದಂಡದಿಂದ ಹುಡುಗಿಯ ಆಯ್ಕೆ ಮಾಡುತ್ತಿರಲಿಲ್ಲ. ಅವರಿಗೆ ಬೇಕಾದುದು ಗುಣಶೀಲ, ಶಾಂತ ಸ್ವಭಾವದ, ಸತ್ ಸಂಪ್ರದಾಯದ ಹೆಣ್ಣು.

ಇತ್ತೀಚೆಗೆ ಎಂದೂ ಬರದ ನಾರಾಯಣರಾಯರು ಆಕಸ್ಮಿಕವಾಗಿ ಬಂದು ಅವಸರದಲ್ಲಿ ಹೊರಟು ಹೋದ ಕಾರಣವೇನು ಎಂದು ತಿಳಿಯದೆ ಗೊಂದಲದಲ್ಲಿ ಬಿದ್ದ ಪುರುಷೋತ್ತಮರಾಯರು, ನಾರಾಯಣರಾಯರು ಬಂದು ಹೋದ ಕಾರಣ ತಿಳಿದುಕೊಳ್ಳಲು ಒಂದು ಪತ್ರವನ್ನಾದರೂ ಬರೆಯೋಣವೆಂದು ಮಸಿದೌತಿ ಇಟ್ಟ ಪಾತ್ರೆಗೆ ಕೈಹಾಕಿದರು. ಅವರ ಬೆರಳುಗಳಿಗೆ ಏನೋ ಸ್ಪರ್ಶವಾಯಿತು. ದೌತಿ ಎತ್ತಿ ನೋಡಿದರು. ತಳದಲ್ಲಿ ಸುವರ್ಣ ಮುದ್ರೆಯಿತ್ತು!

ಮಕ್ಕಳು ಆಟದಲ್ಲಿ ಕಳೆದುಕೊಂಡ ಮೊಹರು ಮರುದಿನವೇ ಸಿಕ್ಕಿತ್ತು. ಈ ಮೊಹರು ಯಾರದು? ಯಾರು ಇಲ್ಲಿಟ್ಟಿದ್ದಾರೆ ಎಂದು ತಿಳಿದುಕೊಳ್ಳಲು ಅವರು ಕಾರಭಾರಿಯನ್ನು ಕರೆದರು.

'ಈ ಸುವರ್ಣ ಮೊಹರು ಯಾರದು? ಯಾರು ಇಲ್ಲಿಟ್ಟಿದ್ದಾರೆ?'

ಪುರುಷೋತ್ತಮರಾಯರು ಕಾರಭಾರಿಯನ್ನು ಕೇಳಿದರು.

'ನಮ್ಮದೇ ಇರ್‌ಬೇಕು.'

'ಹಾಗಿದ್ದರೆ ನಿನ್ನೆ ಸಿಕ್ಕ ಮೊಹರು ಯಾರದು?'

'ಹೌದಲ್ಲವೆ? ಇದು ಯಾರದ್ದು?' ಅವನು ಓಡುತ್ತ ಹೋಗಿ ತಿಜೋರಿ ಬಾಗಿಲು ತೆರೆದು ಕರಂಡಕದಲ್ಲಿಟ್ಟ ಮೊಹರು ತಂದು ರಾಯರಿಗೆ ತೋರಿಸಿದ.

ಆ ದೌತಿಯ ತಟ್ಟೆಯ ಮಳಲಿನಲ್ಲಿದ್ದ ಮೊಹರು ತಮ್ಮದಲ್ಲವೆಂದು ಅವರಿಗೆ ಅರ್ಥವಾಯಿತು.

'ನಾನಿಲ್ಲದಾಗ ಈ ದಿವಾನ ಖಾನೆಗೆ ಯಾರು ಬಂದಿದ್ದರು?'

ರಾಯರು ಕಾರಭಾರಿಯನ್ನು ಪ್ರಶ್ನಿಸಿದರು.

'ಆ ದಿನ ಬಂದವರು ನಾರಾಯಣರಾಯರು ಮಾತ್ರ. ಅವರು ಇಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಮತ್ತೆ ಯಾರೂ ಇಲ್ಲಿ ಬರಲಿಲ್ಲ.'

ಪುರುಷೋತ್ತಮರಾಯರಿಗೆ ತನ್ನ ತಲೆಯ ಮೇಲೆ ಯಾರೋ ಭಾರವಾದ ಕಲ್ಲು ಎತ್ತಿಟ್ಟಂತಾಯಿತು. ಇದು ನಾರಾಯಣರಾಯರ ಮನೆತನದ ಭಾಗ್ಯಲಕ್ಷ್ಮಿಯಾದ ಮೊಹರು ಎಂದು ಅರ್ಥವಾಯಿತು. ಅಂದು ನಾರಾಯಣರಾಯರು ಅವಸರವಸರವಾಗಿ ಹೊರಟು ಹೋದ ಕಾರಣವೂ ತಿಳಿಯಿತು. ಅವರು ಮೊಹರನ್ನು ಶ್ರದ್ಧೆಯಿಂದ ಕಣ್ಣಿಗೊತ್ತಿಕೊಂಡರು. ಕಾರಭಾರಿಗಳ ಮುಖ ಬಾಡಿದ ಬದನೆಕಾಯಿಯಾಗಿತ್ತು. ಅಂದು ನಡೆದ ಘಟನೆಯ ಹಿನ್ನೆಲೆ ಅರಿತುಕೊಂಡ ಪುರುಷೋತ್ತಮರಾಯರಿಗೆ ತನ್ನ ಮನೆತನದ 'ಮಾನ' ಕಾಪಾಡಲು ಮನೆತನದ ಲಕ್ಷ್ಮಿಯಾಗಿದ್ದ ಅಮೂಲ್ಯ ಮೊಹರು ಬಿಟ್ಟು ಹೋದ ನಾರಾಯಣರಾಯರ ಬಗ್ಗೆ ಅಭಿಮಾನ ಹೆಚ್ಚಾಯಿತು. ಈ ಸುವರ್ಣ ಮೊಹರನ್ನು ಒಪ್ಪಿಸಿ ನಾರಾಯಣರಾಯರ ಕ್ಷಮೆ ಕೇಳಬೇಕೆಂದು ಆಲೋಚಿಸಿದ ಪುರುಷೋತ್ತಮರಾಯರು ವೇಷಭೂಷಣ ಧರಿಸಿ ಒಡವೆಗಳ ಭಂಡಾರದಿಂದ ಒಂದು ಬೆಲೆಬಾಳುವ ಒಡವೆ ತೆಗೆದು ಜೇಬಿನಲ್ಲಿಟ್ಟುಕೊಂಡು ನಾರಾಯಣರಾಯರನ್ನು ಕಾಣಲು ಹೊರಟರು.